KARN210012552021

<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ಚನ್ನಪಟ್ಟಣ</u>

<u>:ಉಪಸ್ಥಿತರುಃ</u>

**ಶ್ರೀ.ವೆಂಕಟೇಶಪ್ಪ ವಿ.,** ಬಿ.ಎ. ಎಲ್.ಎಲ್.ಬಿ.
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ

<u>ದಿನಾಂಕ **27** ನೇ ಜುಲೈ - **2026** ನೇ ಇಸವಿ</u>

<u>ಸಿ.ಸಿ.ಸಂಖ್ಯೆಃ **534/2021**</u>

**<u>ಫಿರ್ಯಾದುದಾರರುಃ</u>**

ಸರ್ಕಾರದ ಪರವಾಗಿಃ
ಅಕ್ಕೂರು ಪೊಲೀಸ್ ಠಾಣೆ
ಅಕ್ಕೂರು, ಚನ್ನಪಟ್ಟಣ

**(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)**

**ವಿರುದ್ಧ**

**<u>ಆರೋಪಿತರು :</u>**

ಪುನೀತ್
ಬಿನ್ ಪುಟ್ಟಸ್ವಾಮಿಗೌಡ,
ವಯಸ್ಸು 26 ವರ್ಷ,
ವಿವಾಸಃ ಕಾಡಂಕನಹಳ್ಳಿ ಗ್ರಾಮ,
ವಿರೂಪಾಕ್ಷಿಪುರ ಹೋಬಳಿ,
ಚನ್ನಪಟ್ಟಣ ತಾಲ್ಲೂಕು
ರಾಮನಗರ ಜಿಲ್ಲೆ.

**(ಆರೋಪಿತರ ಪರ ಪ್ರತಿನಿಧಿಸುವವರು ಶ್ರೀ. ಹೆಚ್ ಎಸ್ ಹೆಚ್, ವಕೀಲರು)**

| | |
|---|---|
| ತಕ್ಷೀರು ನಡೆದ ದಿನಾಂಕ | 09.06.2021 |
| ತಕ್ಷೀರು ವರದಿ ಮಾಡಿದ ದಿನಾಂಕ | 09.06.2021 |
| ಫಿರ್ಯಾದುದಾರರ ಹೆಸರು | ಶ್ರೀಮತಿ ಸುಶೀಲ |
| ಸಾಕ್ಷಿದಾರರ ಹೇಳಿಕೆಯ ದಿನಾಂಕ | 24.07.2026 |
| ಸಾಕ್ಷಿದಾರರ ಹೇಳಿಕೆಯು ಮುಕ್ತಾಯವಾದ ದಿನಾಂಕ | 25.07.2026 |
| ಅಪಾದಿಸಲಾದ ಅಪಾದನೆಗಳು | ಭಾರತೀಯ ದಂಡ ಸಂಹಿತೆ ಕಲಂ.279, 303(4). |
| ನ್ಯಾಯಾಲಯದ ತೀರ್ಮಾನ | ನಿರ್ದೋಷಿತರು |

**(ವೆಂಕಟೇಶಪ್ಪ.ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನಪಟ್ಟಣ**

**:: ತೀರ್ಪು::**

ಚನ್ನಪಟ್ಟಣ ಗ್ರಾಮಾಂತರ ಠಾಣೆಯ ವೃತನಿರೀಕ್ಷಕರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.279, 304(A) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆಂದು ಆಪಾದಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರ:**

ದಿನಾಂಕಃ **09.06.2021** ರಂದು ಬೆಳಿಗ್ಗೆ **9.30** ಗಂಟೆ ಸಮಯದಲ್ಲಿ ಚನ್ನಪಟ್ಟಣ ತಾಲ್ಲೂಕು, ವಿರೂಪಾಕ್ಷಿಪುರ ಹೋಬಳಿ, ಕಾಡಂಕನಹಳ್ಳಿ-

ನೆಲಮಾಕನಹಳ್ಳಿ ಮಾರ್ಗದಲ್ಲಿರುವ ಮುಕುಂದ ಬಿನ್ ಮರೀಗೌಡ ರವರ ಜಮೀನಿನ ಮುಂಭಾಗದ ರಸ್ತೆಯಲ್ಲಿ ಚಾಸಾ-1 ರವರು ತನ್ನ ತಾಯಿ ಶ್ರೀಮತಿ ಕೆಂಪಮ್ಮ ರವರನ್ನು KA.42-EB-8617 ಟಿ.ವಿ.ಎಸ್ ಎಕ್ಸ್ ಎಲ್ ಸ್ಕೂಟರ್ ಹಿಂಬದಿಯ ಸೀಟಿನಲ್ಲಿ ಕೂರಿಸಿಕೊಂಡು ತಮ್ಮ ಗ್ರಾಮಕ್ಕೆ ಹೋಗುತ್ತಿರುವಾಗ, ಆರೋಪಿಯು KA.42-EC-6318 ಹಿರೋ ಮೋಟಾರ್ ಸೈಕಲ್ ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಬಂದು ಟಿ.ವಿ.ಎಸ್ ಎಕ್ಸ್ ಎಲ್ ಸ್ಕೂಟರ್ ಗೆ ಡಿಕ್ಕಿ ಹೊಡೆದಿರುತ್ತಾನೆ. ಅಪಘಾತದಲ್ಲಿ ಟಿ.ವಿ.ಎಸ್ ಎಕ್ಸ್ ಎಲ್ ಸ್ಕೂಟರ್ ಹಿಂಬದಿಯಲ್ಲಿ ಕುಳಿತ್ತಿದ್ದ ಶ್ರೀಮತಿ ಕೆಂಪಮ್ಮ ರವರು ಟಾರು ರಸ್ತೆಯ ಮೇಲೆ ಬಿದ್ದ ಪರಿಣಾಮ ತಲೆಗೆ ಮತ್ತು ಮೈ, ಕೈಗಳಿಗೆ ತೀವ್ರ ಏಟು ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಈ ಅಪಘಾತದಲ್ಲಿ ಚಾಸಾ-1 ರವರಿಗೆ ಮೂಗೇಟುಗಳಾಗಿದ್ದು ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ ಎಂದು ತನಿಖೆಯಿಂದ ದೃಢಪಟ್ಟಿರುತ್ತದೆ ಎಂಬುದು ಅಭಿಯೋಜನೆಯ ಪ್ರಕರಣದ ಸಾರಾಂಶವಾಗಿರುತ್ತದೆ.

3. ಆರೋಪಿತರು ವಕೀಲರ ಮುಖಾಂತರ ಹಾಜರಾಗಿ ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡು, ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರ ಪ್ರಕಾರ ಆರೋಪಿತರಿಗೆ ದೋಷಾರೋಪಣಾ ಪಟ್ಟಿಯ ಪ್ರತಿಯನ್ನು ನ್ಯಾಯಾಲಯವು ಪೂರೈಸಿದ್ದು, ಆರೋಪಿತರ ವಿರುದ್ಧ ಈ ನ್ಯಾಯಾಲಯವು ಮಾಡಲಾದ ಆಪಾದನೆಯನ್ನು ತಾವು ಯಾವುದೇ ತಪ್ಪನ್ನು

ಮಾಡಿಲ್ಲವೆಂದು ಮತ್ತು ಸದರಿ ಮೊಕದ್ದಮೆಯು ವಿಚಾರಣೆಯಾಗಬೇಕೆಂದು ತಿಳಿಸಿದ್ದರಿಂದ ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯು ನಡೆಸಲ್ಪಟ್ಟಿರುತ್ತದೆ.

4. ಅಭಿಯೋಜನೆಯ ಪರ ಹಾಜರುಪಡಿಸಿದ 13 ಜನ ಸಾಕ್ಷಿದಾರರ ಪೈಕಿ ಸಾಕ್ಷ್ಯ ವಿಚಾರಣೆಯಲ್ಲಿ ಪ್ರಾಸಾ.1 ರಿಂದ ಪ್ರಾಸಾ.4 ರವರು ವಿಚಾರಣೆಗೆ ಒಳಪಟ್ಟಿರುತ್ತಾರೆ. ಅಭಿಯೋಜನೆಯ ಪರ ನಿಶಾನೆ.ಪಿ.1 ರಿಂದ ಪಿ.6 ರಂತೆ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಸದರಿ ಮೊಕದ್ದಮೆಯಲ್ಲಿ ಪ್ರಾಸಾ.1 ರಿಂದ ಪ್ರಾಸಾ.4 ರವರು ರವರ ಸಾಕ್ಷ್ಯಗಳು ಪ್ರತಿಕೂಲ ಸಾಕ್ಷ್ಯಗಳೆಂದು ಪರಿಗಣಿಸಲ್ಪಟ್ಟಿರುವುದರಿಂದ ಆರೋಪಿತರ ವಿರುದ್ಧ ಆರೋಪಿಸಲ್ಪಟ್ಟಿರುವ ಅಪಾದನೆಗಳನ್ನು ಸಾಬೀತು ಪಡಿಸುವ ಯಾವುದೇ ಸಾಕ್ಷ್ಯವು ಇಲ್ಲದ ಕಾರಣ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಕೆಳಗಿನ ಪ್ರಕ್ರಿಯೆಗಳನ್ನು ಮನ್ನಾ ಮಾಡಲಾಗಿರುತ್ತದೆ.

5. ಆರೋಪಿತರು ತಮ್ಮ ಪರ ಯಾವುದೇ ಸಾಕ್ಷ್ಯ ವಿಚಾರಣೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

6. ಇಬ್ಬರ ಪರ ವಾದವನ್ನು ಕೇಳಿರುತ್ತೇನೆ. ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಿರುತ್ತೇನೆ.

7. ಈ ಪ್ರಕರಣವನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

**:: ಅಂಶಗಳು::**

**1.** ದಿನಾಂಕಃ **09.06.2021** ರಂದು ಬೆಳಿಗ್ಗೆ **9.30** ಗಂಟೆ ಚನ್ನಪಟ್ಟಣ ತಾಲ್ಲೂಕು, ವಿರೂಪಾಕ್ಷಿಪುರ ಹೋಬಳಿ, ಕಾಡಂಕನಹಳ್ಳಿ-ನೆಲಮಾಕನಹಳ್ಳಿ ಮಾರ್ಗದಲ್ಲಿರುವ ಮುಕುಂದ ಬಿನ್ ಮರೀಗೌಡ ರವರ ಜಮೀನಿನ ಮುಂಭಾಗದ ರಸ್ತೆಯಲ್ಲಿ ಚಾಸಾ-**1** ರವರು ತನ್ನ ತಾಯಿ ಶ್ರೀಮತಿ ಕೆಂಪಮ್ಮ ರವರನ್ನು **KA.42-EB-8617** ಟಿ.ವಿ.ಎಸ್ ಎಕ್ಸ್ ಎಲ್ ಸ್ಕೂಟರ್ ಹಿಂಬದಿಯ ಸೀಟಿನಲ್ಲಿ ಕೂರಿಸಿಕೊಂಡು ತಮ್ಮ ಗ್ರಾಮಕ್ಕೆ ಹೋಗುತ್ತಿರುವಾಗ ಆರೋಪಿಯು **KA.42-EC-6318** ಹಿರೋ ಮೋಟಾರ್ ಸೈಕಲ್ ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಬಂದು ಟಿ.ವಿ.ಎಸ್ ಎಕ್ಸ್ ಎಲ್ ಸ್ಕೂಟರ್ ಗೆ ಡಿಕ್ಕಿ ಹೊಡೆದಿರುತ್ತಾನೆ. ಆದಕಾರಣ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ.**279** ಪ್ರಕಾರ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತದೆಯೇ?

**2.** ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ, ಆರೋಪಿತನು ಮಾಡಿದ ಅಪಘಾತದಲ್ಲಿ ಟಿ.ವಿ.ಎಸ್ ಎಕ್ಸ್ ಎಲ್ ಸ್ಕೂಟರ್ ಹಿಂಬದಿಯಲ್ಲಿ ಕುಳಿತ್ತಿದ್ದ ಶ್ರೀಮತಿ ಕೆಂಪಮ್ಮ ರವರು ಟಾರು ರಸ್ತೆಯ ಮೇಲೆ ಬಿದ್ದ ಪರಿಣಾಮ ತಲೆಗೆ ಮತ್ತು ಮೈ, ಕೈಗಳಿಗೆ ತೀವ್ರ ಏಟು ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಆದಕಾರಣ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ.**304**(ಎ) ಪ್ರಕಾರ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತದೆಯೇ?

**3.** ಮಾಡುವ ಆದೇಶ ಏನು ?

8. ಈ ನ್ಯಾಯಾಲಯವು ವಾದವನ್ನು ಆಲಿಸಿ ದಾಖಲೆಗಳನ್ನು ಪರಿಶೀಲಿಸಿ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

**ಅಂಶ ಸಂಖ್ಯೆ 1 : ನಕರಾತ್ಮಕವಾಗಿ**

**ಅಂಶ ಸಂಖ್ಯೆ 2 : ನಕರಾತ್ಮಕವಾಗಿ**

**ಅಂಶ ಸಂಖ್ಯೆ 3 : ಅಂತಿಮ ಆದೇಶದಂತೆ**

**ಈ ಕೆಳಕಂಡ ಕಾರಣಗಳಿಗಾಗಿ**

**ಕಾರಣಗಳು**

9. **ಅಂಶ ಸಂಖ್ಯೆ 1 ಮತ್ತು 2** ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಇವುಗಳನ್ನು ಒಟ್ಟಿಗೆ ತೆಗೆದುಕೊಳ್ಳಲಾಗಿದೆ.

10. ಈ ಪ್ರಕರಣದಲ್ಲಿ ಅಭಿಯೋಜನೆಯವರು ಆರೋಪಿತನ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.279, 304(ಎ) ಕೆಳಗೆ ಅಪರಾಧವೆಸಗಿರುವ ಕುರಿತು ಆರೋಪ ಹೊರಿಸಿದ್ದು, ತಮ್ಮ ಪ್ರಕರಣವನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ತಮ್ಮ ಪರ ಸಾಕ್ಷ್ಯ ವಿಚಾರಣೆಗಾಗಿ ನಾಲ್ಕು ಜನ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುತ್ತಾರೆ.

11. ಚಾಸಾ.1/ಪ್ರಾಸಾ.1 ಸುಶೀಲ ರವರು ಈ ಪ್ರಕರಣದಲ್ಲಿ ದೂರುದಾರರು ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿ ಗೊತ್ತಿಲ್ಲ. ಮೃತ ಕೆಂಪಮ್ಮ ನನ್ನ ತಾಯಿ. ನನ್ನ ತಾಯಿ ಅಪಘಾತದಲ್ಲಿ ಮೃತ ಪಟ್ಟಿರುತ್ತಾರೆ. ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೋಲಿಸರಿಗೆ ದೂರು ನೀಡಿರುವುದಾಗಿ, ಆ ಸಮಯದಲ್ಲಿ ನಿಶಾನೆ ಪಿ-**1** ರ ಬರವಣಿಗೆಯ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ ಎಂದು ಪ್ರತಿಕೂಲ ಸಾಕ್ಷ್ಯ ನುಡಿರುತ್ತಾರೆ

ನಾನು ಪೋಲಿಸರ ಮುಂದೆ ಮುಂದುವರೆದ ಹೇಳಿಕೆಯನ್ನು ನೀಡಿಲ್ಲ ಎಂದು ಪ್ರತಿಕೂಲ ಸಾಕ್ಷ್ಯ ನುಡಿದು**,** ಸ್ವತಃ ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ**.** ಚಾಸಾ**.2/**ಪ್ರಾಸಾ**.2** ಕೆಂಚಯ್ಯ ರವರು ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು**,** ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿ ಗೊತ್ತಿಲ್ಲ**.** ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ**.** ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ**.** ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ಪಡೆದಿಲ್ಲ**.** ಪೋಲಿಸರು ನನ್ನ ಸಮಕ್ಷಮ ಮಹಜರ್ ಮಾಡಿಲ್ಲ**.** ಪೋಲಿಸರು ನನ್ನ ಸಮಕ್ಷಮ ಮುದ್ದೆ ಮಾಲುಗಳನ್ನು ಜಪ್ತು ಮಾಡಿಕೊಂಡಿಲ್ಲ ಎಂದು ಪ್ರತಿಕೂಲ ಸಾಕ್ಷ್ಯ ನುಡಿದು**,** ಸ್ವತಃ ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ**.** ಚಾಸಾ**.4/**ಪ್ರಾಸಾ**.3** ರವಿಕುಮಾರ್ ರವರು ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು**,** ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿ ಗೊತ್ತಿಲ್ಲ**.** ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ**.** ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ**.** ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿಲ್ಲ ಎಂದು ಪ್ರತಿಕೂಲ ಸಾಕ್ಷ್ಯ ನುಡಿದು**,** ಸ್ವತಃ ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ**.** ಚಾಸಾ**.3/**ಪ್ರಾಸಾ**.4** ಕುಮಾರ್ ರವರು ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು**,** ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿ ಗೊತ್ತಿಲ್ಲ**.** ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ**.** ಅಪಘಾತ

ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ. ಪೋಲಿಸರು ನನ್ನ ಸಮಕ್ಷಮ ಮಹಜರ್ ಮಾಡಿಲ್ಲ. ಪೋಲಿಸರು ನನ್ನ ಸಮಕ್ಷಮ ಮುದ್ದೆ ಮಾಲುಗಳನ್ನು ಜಪ್ತು ಮಾಡಿಕೊಂಡಿಲ್ಲ ಎಂದು ಪ್ರತಿಕೂಲ ಸಾಕ್ಷ್ಯ ನುಡಿದು, ಸ್ವತಃ ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ. ಪ್ರಾ.ಸಾ.**1** ರಿಂದ ಪ್ರಾ.ಸಾ.**4** ರವರ ಈ ಮೇಲಿನ ಸಾಕ್ಷ್ಯ ಹೇಳಿಕೆಗಳನ್ನು ಗಮನಿಸಿದಾಗ ಪ್ರಾ.ಸಾ.**1** ರಿಂದ ಪ್ರಾ.ಸಾ.**4** ರವರ ಸಾಕ್ಷ್ಯವು ದೂರಿನಲ್ಲಿರುವ ಎಲ್ಲಾ ವಿಷಯಗಳಿಗೆ ಸಂಪೂರ್ಣ ವ್ಯತಿರಿಕ್ತವಾಗಿರುವುದು ಕಂಡು ಬರುತ್ತದೆ. ಸರ್ಕಾರಿ ಅಭಿಯೋಜಕರು ಈ ಮೂಲಕ ಪ್ರತಿಕೂಲ ಸಾಕ್ಷ್ಯವಾಗಿ ಪರಿಗಣಿಸಲಾದ ಪ್ರಾ.ಸಾ.**1** ರಿಂದ ಪ್ರಾ.ಸಾ.**4** ರವರನ್ನು ಪಾಟೀ ಸವಾಲಿಗೆ ಗುರಿಪಡಿಸಿದ್ದರೂ ಸಹ ಪ್ರಾ.ಸಾ.**1** ರಿಂದ ಪ್ರಾ.ಸಾ.**4** ರವರು ಆರೋಪಿತರ ವಿರುದ್ಧ ಇರುವ ಎಲ್ಲಾ ಆರೋಪಗಳನ್ನು ಸಾರಾಸಗಟಾಗಿ ನಿರಾಕರಿಸಿರುತ್ತಾರೆ. ಈ ಮೂಲಕ ಅಭಿಯೋಜನೆಯವರು ಪ್ರಾ.ಸಾ.**1** ರಿಂದ ಪ್ರಾ.ಸಾ.**4** ರವರ ಪಾಟೀ ಸವಾಲಿನ ಮುಖಾಂತರವೂ ಯಾವುದೇ ಸಾಕ್ಷ್ಯ ಹೇಳಿಕೆಗಳನ್ನು ತಮ್ಮ ಪರ ಪಡೆಯುವಲ್ಲಿ ವಿಫಲರಾಗಿರುತ್ತಾರೆ. ಪ್ರಾ.ಸಾ.**1** ರಿಂದ ಪ್ರಾ.ಸಾ.**4** ರವರ ಸಾಕ್ಷ್ಯದ ಮುಖಾಂತರ ಆರೋಪಿತರ ವಿರುದ್ಧ ಇರುವ ಯಾವುದೇ ಆರೋಪಗಳನ್ನು ಸಾಬೀತು ಪಡಿಸುವಲ್ಲಿ ಅಭಿಯೋಜನೆಯವರು ಸ್ಪಷ್ಟ ವೈಫಲ್ಯ ಹೊಂದಿರುವ ಹಿನ್ನಲೆಯಲ್ಲಿ ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡುವ ಪ್ರಕ್ರಿಯೆಗಳನ್ನು ಕೈ ಬಿಡಲಾಗಿರುತ್ತದೆ. ಆದ್ದರಿಂದ

ಅಭಿಯೋಜನೆಯವರು ಆರೋಪಿತನ ಮೇಲೆ ಆಪಾದಿಸಿದಂತೆ ಆರೋಪಗಳನ್ನು ನಿಸ್ಸಂಶಯವಾಗಿ ಸಾಬೀತು ಪಡಿಸುವಲ್ಲಿ ವಿಫಲರಾಗಿರುತ್ತಾರೆ. ಈ ಮೂಲಕ ಸಂಶಯದ ಲಾಭವನ್ನು ಪಡೆಯಲು ಆರೋಪಿತರು ಅರ್ಹರಾಗಿದ್ದಾರೆಂದು ನ್ಯಾಯಾಲಯವು ಪರಿಗಣಿಸುತ್ತಾ **1 ಮತ್ತು 2 ನೇ ಅಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.**

12. **<u>ಅಂಶ ಸಂಖ್ಯೆ 3:</u>** ಈ ಮೇಲ್ಕಂಡ 1 ಮತ್ತು 2 ನೇ ಅಂಶದಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## **:: ಆದೇಶ::**

**ಆರೋಪಿಯ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆ ಕಲಂ.279, 304(ಎ) ರಡಿಯಲ್ಲಿನ ದೋಷಾರೋಪಣೆಗಳಿಂದ ನಿರ್ದೋಷಿ ಎಂದು ತೀರ್ಮಾನಿಸಿ, ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ.255(1) ರಡಿಯಲ್ಲಿ ಬಿಡುಗಡೆ ಮಾಡಲಾಗಿದೆ.**

**ಆರೋಪಿತರ ಮತ್ತು ಜಾಮೀನುದಾರರು ಈಗಾಗಲೇ ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಲಾಗಿದೆ.**

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, **2026 ನೇ** ಇಸವಿ ಜುಲೈ **27 ನೇ** ದಿನಾಂಕದಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

VENKATESHAPPA V
Digitally signed by VENKATESHAPPA V
Date: 2026.07.28 17:10:01 +0530

**(ವೆಂಕಟೇಶಪ್ಪ.ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನಪಟ್ಟಣ**

**: ಅನುಬಂಧ ::**

**ಅಭಿಯೋಜನೆಯ ಪರವಾಗಿ ವಿಚಾರಣೆಗೊಳ್ಳಪಟ್ಟ ಸಾಕ್ಷಿದಾರರ ಪಟ್ಟಿಃ**

| | | |
|---|---|---|
| ಪ್ರಾಸಾ.1 | : | ಶ್ರೀಮತಿ ಸುಶೀಲ |
| ಪ್ರಾಸಾ.2 | : | ಶ್ರೀ ಕೆಂಚಯ್ಯ |
| ಪ್ರಾಸಾ.3 | : | ಶ್ರೀ ರವಿಕುಮಾರ್ |
| ಪ್ರಾಸಾ.4 | : | ಶ್ರೀ ಕುಮಾರ್ |

**ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟಿರುವ ದಾಖಲೆಗಳ ಪಟ್ಟಿಃ**

| | | |
|---|---|---|
| ನಿಶಾನೆ ಪಿ 1 | : | ದೂರು |
| ನಿಶಾನೆ ಪಿ 1(ಎ) | : | ಪ್ರಾಸಾ.1 ರವರ ಸಹಿ |
| ನಿಶಾನೆ ಪಿ 2 | : | ಪ್ರಾಸಾ.1 ರವರ ಹೇಳಿಕೆ |
| ನಿಶಾನೆ ಪಿ 3 | : | ಮಹಜರ್ |
| ನಿಶಾನೆ ಪಿ 3(ಎ) | : | ಪ್ರಾಸಾ.2 ರವರ ಸಹಿ |
| ನಿಶಾನೆ ಪಿ 3(ಬಿ) | : | ಪ್ರಾಸಾ.3 ರವರ ಸಹಿ |
| ನಿಶಾನೆ ಪಿ 4 | : | ಪ್ರಾಸಾ.2 ರವರ ಹೇಳಿಕೆ |
| ನಿಶಾನೆ ಪಿ 5 | : | ಪ್ರಾಸಾ.3 ರವರ ಹೇಳಿಕೆ |
| ನಿಶಾನೆ ಪಿ 6 | : | ಪ್ರಾಸಾ.4 ರವರ ಹೇಳಿಕೆ |

**ಆರೋಪಿಗಳ ಪರವಾಗಿ ವಿಚಾರಣೆಗೊಳ್ಳಪಟ್ಟ ಸಾಕ್ಷಿದಾರರ ಪಟ್ಟಿಃ**

-ಇಲ್ಲ-

**ಆರೋಪಿಗಳ ಪರವಾಗಿ ಗುರುತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿಃ**

-ಇಲ್ಲ-

**ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟಿರುವ ಮುದ್ದೆಮಾಲುಗಳುಃ**

-ಇಲ್ಲ-

**(ವೆಂಕಟೇಶಪ್ಪ.ವಿ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನಪಟ್ಟಣ